**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯದಲ್ಲಿ, ತರೀಕೆರೆ.**

**ಸಿ.ಸಿ. 519/2023**

ಪಿರ್ಯಾದುದಾರರು ಃ ಸರ್ಕಾರದ ಪರವಾಗಿ ತರೀಕೆರೆ ಪೊಲೀಸರಿಂದ

-ವಿರುದ್ಧ-

ಆರೋಪಿ/ತರು ಃ ಮಲ್ನಾಡ್ ನಾಗರಾಜ ಮತ್ತು ಇನ್ನೊಬ್ಬರು

**-ಃದೋಷಾರೋಪಣೆಃ-**

ಶ್ರೀ ವೈದ್ಯ ಶ್ರೀಕಾಂತ್, ಬಿ.ಎಸ್ಸಿ., ಎಲ್.ಎಲ್.ಬಿ., ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ತರೀಕೆರೆ ಆದ ನಾನು ಈ ಕೆಳಗೆ ಕಾಣಿಸಿರುವಃ

1. ಮಲ್ನಾಡ್ ನಾಗರಾಜ ಬಿನ್ ಅರೆಮಲ್ಲಪ್ಪ, 49 ವರ್ಷ, ವಾಸಃಕೋಡಿಕ್ಯಾಂಪ್, ತರೀಕೆರೆ.
2. ನಾಗರಾಜ ಟಿ ಆರ್ ಬಿನ್ ಲೇಟ್ ರೇವಣ್ಣ, 65 ವರ್ಷ, ವ್ಯಾಪಾರ, ತರೀಕೆರೆ.
3. ಆಟೋ ರಮೇಶ ಬಿನ್ ಲೇಟ್ ಮಲ್ಲಪ್ಪ, 42 ವರ್ಷ, ವ್ಯವಸಾಯ, ವಾಸಃ ತರೀಕೆರೆ.
4. ನವೀನ್ ಕುಮಾರ ಟಿ ಕೆ ಬಿನ್ ಕೃಷ್ಣಮೂರ್ತಿ, ಟಿ ಹೆಚ್, 32 ವರ್ಷ, ವ್ಯವಸಾಯ, ವಾಸಃತರೀಕೆರೆ.

ಆದ ನಿಮ್ಮ ವಿರುದ್ಧ ಈ ಕೆಳಗಿನಂತೆ ಹೊರಿಸಿರುವ ದೋಷಾರೋಪಣೆ ಎಂದರೆಃ

ತರೀಕೆರೆ ಪೊಲೀಸ್ ಠಾಣಾ ಸರಹದ್ದಿನ ತರೀಕೆರೆ ಕಸಬಾ ಸರ್ವೇ ನಂಬರ್ 190/1 ರಲ್ಲಿ ಚಾಸಾ-1 ರವರ ಅಣ್ಣನ ಹೆಂಡತಿ ಚಾಸಾ-6 ರವರ ಹೆಸರಿನಲ್ಲಿ 0.16 ಗುಂಟೆ ಜಮೀನಿದ್ದು, ಸದರಿ ಜಮೀನಿನ ವಿಚಾರದಲ್ಲಿ ಚಾಸಾ-1 ರವರಿಗೂ ಹಾಗೂ 1 ರಿಂದ 4 ನೇ ಆರೋಪಿತರಾದ ನಿಮಗೂ ಆಗಾಗ್ಗ ಗಲಾಟೆ ನಡೆಯುತ್ತಿದ್ದು, ಈ ವಿಚಾರವಾಗಿ ಹಾಲಿ ಘನ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ 73/2015 ರಲ್ಲಿ ನಡೆಯುತ್ತಿರುತ್ತದೆ. ದಿಃ10.05.2022 ರಂದು ಬೆಳಿಗ್ಗ 9-00 ರ ಸಮಯದಲ್ಲಿ ಚಾಸಾ-2 ರಿಂದ 4 ರವರು ಜಮೀನಿಗೆ ತಂತಿ ಬೇಲಿ ಹಾಕಲು ಹೋಗಿದ್ದ ಮಧ್ಯಾಹ್ನ 1-00 ರ ಸಮಯದಲ್ಲಿ 1 ರಿಂದ 4 ನೇ ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ ಜಮೀನಿಗೆ ಅಕ್ರಮ ಪ್ರವೇಶ ಮಾಡಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆಯ ಕಲಂ.**447** ಸಹಕಲಂ **34** ರ ರೀತ್ಯಾ ಅಪರಾಧವನ್ನು ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೇಲ್ಕಂಡ ಸ್ಥಳ, ದಿನಾಂಕ, ಮತ್ತು ಸಮಯದಲ್ಲಿ 2 ನೇ ಆರೋಪಿಯಾದ ನೀವು ಚಾಸಾ-1 ರವರಿಗೆ ಬೋಳಿಮಗನೇ ನಿಮ್ಮ ಅಪ್ಪನದೂ ಏನೂ ಇಲ್ಲವೆಂದು ಅವಾಚ್ಯವಾಗಿ ಬೈದಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆಯ ಕಲಂ.**504** ಸಹಕಲಂ **34** ರ ರೀತ್ಯಾ ಅಪರಾಧವನ್ನು ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೇಲ್ಕಂಡ ಸ್ಥಳ, ದಿನಾಂಕ, ಮತ್ತು ಸಮಯದಲ್ಲಿ 4 ನೇ ಆರೋಪಿಯಾದ ನೀವು ಚಾಸಾ-5 ರವರಿಗೆ ಕಾಲಿನಿಂದ ಸೊಂಟಕ್ಕೆ ಹೊಡೆದು ಸಾಮಾನ್ಯ ಸ್ವರೂಪದ ನೋವುಂಟು ಮಾಡಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆಯ ಕಲಂ.**323** ಸಹಕಲಂ **34** ರ ರೀತ್ಯಾ ಅಪರಾಧವನ್ನು ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೇಲ್ಕಂಡ ಸ್ಥಳ, ದಿನಾಂಕ, ಮತ್ತು ಸಮಯದಲ್ಲಿ 4 ನೇ ಆರೋಪಿಯಾದ ನೀವು ಚಾಸಾ-4 ರವರಿಗೆ ದೊಣ್ಣೆಯಿಂದ ಬಲಭುಜಕ್ಕೆ ಹೊಡೆದಿದ್ದು, ಆ ಸಮಯದಲ್ಲಿ ಚಾಸಾ-2 ರವರು ದೊಣ್ಣೆ ಕಿತ್ತುಕೊಳ್ಳಲು ಹೋದಾಗ ಅವರನ್ನು ಕೆಳಗೆ ಬೀಳಿಸಿ ದೊಣ್ಣೆಯಿಂದ ಎಡಗಣ್ಣಿನ ಉಬ್ಬಿನ ಭಾಗಕ್ಕೆ ಹೊಡೆದು ರಕ್ತಗಾಯವನ್ನುಂಟು ಮಾಡಿದ್ದು ಹಾಗೂ 3 ನೇ ಆರೋಪಿಯಾದ ನೀವು ಚಾಸಾ-3 ರವರಿಗೆ ದೊಣ್ಣೆಯಿಂದ ಬಲಕುತ್ತಿಗೆಯ ಭಾಗಕ್ಕೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆಯ ಕಲಂ.**324** ಸಹಕಲಂ **34** ರ ರೀತ್ಯಾ ಅಪರಾಧವನ್ನು ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೇಲ್ಕಂಡ ಸ್ಥಳ, ದಿನಾಂಕ, ಮತ್ತು ಸಮಯದಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಚಾಸಾ-1 ರಿಂದ 5 ರವರಿಗೆ ಸೂಳೆಮಕ್ಕಳನ್ನು ಸುಮ್ಮನೆ ಬಿಡಬಾರದು ಸಾಯಿಸಿ ಎಂದು ಪ್ರಾಣ ಬೆದರಿಕೆ ಹಾಕಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆಯ ಕಲಂ.**506** ಸಹಕಲಂ **34** ರ ರೀತ್ಯಾ ಅಪರಾಧವನ್ನು ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಈ ಆರೋಪಗಳ ಮೇಲೆ ನೀವು ಈ ನ್ಯಾಯಾಲಯದ ಆರೋಪ ವಿಚಾರಣೆಗೆ ಗುರಿಯಾಗತಕ್ಕದ್ದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿ:09.01.2026

ಸಹಿ/-

ಹಿ. ಪ್ರದನ್ಯಾದಂ, ತರೀಕೆರೆ.

ಪ್ರ: 1) ನಿಮಗೆ ತಿಳಿಯುವಂತಹ ಭಾಷೆಯಲ್ಲಿ ಓದಿ ಹೇಳಲಾದ ಆರೋಪಣೆಯನ್ನು ನೀವು ಕೇಳಿ ತಿಳಿದುಕೊಂಡಿರುವಿರಾ?

ಉ:

ಎ-1

ಎ-2

ಎ-3

ಎ-4

ಪ್ರ: 2) ಸದರಿ ಆರೋಪಣೆಗಳನ್ನು ನೀವು ಒಪ್ಪಿಕೊಳ್ಳುತ್ತೀರಾ ಅಥವಾ ನಿರಾಕರಿಸುತ್ತೀರಾ?

ಉ:

ಎ-1
ಎ-2

ಎ-3

ಎ-4

(ಆರೋಪವನ್ನು ಆರೋಪಿತರಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ನಾನೇ ಸ್ವತಃ ಬರೆದುಕೊಂಡಿರುವುದು ನಿಜ ಮತ್ತು ಸತ್ಯವಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ)

ದಿನಾಂಕ:09.01.2026

ಸಹಿ/-
ಹಿ. ಪ್ರ.ದ.ನ್ಯಾ.ದಂ ತರೀಕೆರೆ.

ಆರೋಪಿತರ ಸಹಿ: